ಆಸ್ತಿಯನ್ನು ರಕ್ಷಣೆ ಮಾಡತಕ್ಕಂಥ ಒಂದು ವ್ಯವಸ್ಥೆ ಕುಸಿದು ಬಿದ್ದ ಮೇಲೆ ಸರ್ಕಾರ ಇಲ್ಲವೆಂದು ಆಗುತ್ತದೆ. ಈ ದೃಷ್ಟಿಯಿಂದ ನೀವು ಇದನ್ನು ಮಾಡಬೇಕಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳಲ್ಲಿ ತತಕ್ಷಣ ವಿವರಗಳಿಗೆ ತಿಳಿಸಬಹುದು ಇಲ್ಲದೆ ಹೋದರೆ ತಮ್ಮ ಅಪ್ಪಣೆ ಪಡೆದು ಇನ್ನೊಂದು ದಿವಸ ತರಿಸಿಕೊಡಬಹುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹ ಮಂತ್ರಿಗಳು ಹೇಳಿಕೆ ಕೊಡುವುದಕ್ಕಿಂತ ಪೂರ್ವಭಾವಿಯಾಗಿ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಜುಡಿಷಿಯಲ್ ಎನ್‌ಕ್ವೈರಿಗೆ ಸರ್ಕಾರ ಆದೇಶ ನೀಡಿರಬಹುದು. But judicial enquiry is somthing different than judicial process.

ಅಧ್ಯಕ್ಷರು : ಪ್ರೊಫೆಸರ್ ಅವರೇ, ಇದು ಈ ಪ್ರಶ್ನೆ ನಮ್ಮ ಸದನದ ಕಾರ್ಯಕಲಾಪಗಳ ಸಮಿತಿ ಮುಂದೆ ಬಂತು. ಆಗ ಸ್ವಲ್ಪ ಚರ್ಚೆಗೆ ಅವಕಾಶ ಕೊಡಬೇಕೆಂದು ತೀರ್ಮಾನ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲ. ಮುಖ್ಯಮಂತ್ರಿಗಳು ಬಂದ ಮೇಲೆ ಇದನ್ನು ತೆಗೆದುಕೊಳ್ಳೋಣ.

Prof. M.D. Nanjunda Swamy : I just wanted to convey something because in the discussion that might take place later in the day, there need not be any confusion. Judicial enquiry is something different than judicial process. This case crime No. 116/92 is already on the files of the Judicial Magistrate, Kunigal. So, Criminal Procedure Law should take its own course. Logically the Criminal accused should present before the court and then may be bailed himself out. He should do that minimum.

ನಾನು ಮೊದಲೇ ಹೇಳಿದ ಹಾಗೆ ನಮ್ಮ ಗೌರವ ಕಾಪಾಡುವುದಕ್ಕೋಸ್ಕರ ನಮ್ಮೆಲ್ಲರ ಗೌರವ ಕಾಪಾಡುವುದಕ್ಕೋಸ್ಕರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬಂದ ಮೇಲೆ ನೀವು ಮಾತನಾಡುವುದಿಲ್ಲ ಹಾನೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದಕ್ಕೆ ಒಂದು ಮಾತು. ನಾನು ವಿವರಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇದುವರೆಗೂ ಕರ್ನಾಟಕ ರಾಜ್ಯದ ಇತಿಹಾಸಗಳಲ್ಲಿ ಕೊಲೆ ಆಪಾದನೆ ಐ.ಪಿ.ಸಿ. 302ರ ಪ್ರಕಾರ ದೂರು ದಾಖಲಾದ ಮೇಲೆ ಆಪಾದಿತನನ್ನು ಬಂಧಿಸದೆ ತನಿಖೆ ಮುಂದುವರಿಸತಕ್ಕಂಥಾದ್ದು ಯಾವುದಾದರೂ ಉದಾಹರಣೆ ಇದಯೇ ? ನಮ್ಮ ಹೋಮ್ ಮಿನಿಸ್ಟರ್ ಹೇಳಲಿ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಐ ಪಿ ಸಿ 302ರ ಪ್ರಕಾರ ದೂರು ದಾಖಲಾದ ಮೇಲೆ ಸಂಬಂಧಪಟ್ಟ ವ್ಯಕ್ತಿಯನ್ನು ಕೊಲೆ ಆಪಾದನೆ ಮೇಲೆ ಬಂಧಿಸದೇ ಇರುವುದನ್ನು ಈ ರಾಜ್ಯದ ಇತಿಹಾಸದಲ್ಲಿ ಕಂಡುಬರುವ ಒಂದು ಉದಾಹರಣೆಯನ್ನು ಕೊಡಿ. ಐ.ಪಿ.ಸಿ. 302ರ ಕಲಮಿನ ಮೇಲೆ ದೂರು ದಾಖಲಾದ ಮೇಲೆ ಅರೆಸ್ಟ್ ಮಾಡಿಲ್ಲವೆಂಬುದರ ಬಗ್ಗೆ ಮಾನ್ಯ ಹೋಮ್ ಮಿನಿಸ್ಟರ್‌ರವರು ಒಂದು ಉದಾಹರಣೆಯನ್ನು ಕೊಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವಿಚಾರ.

ಅಧ್ಯಕ್ಷರು : ಈಗ ಮಾನ್ಯ ಕಮ್ಮರುಲ್ ಇಸ್ಲಾದರ್‌ರವರು ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದಿರುವ ಲಾಕಪ್ ಡೆತ್ ವಿಚಾರದಲ್ಲಿ ರೈಜ್ ಮಾಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹಿಂದಿನ ದಿವಸ ನಾವು ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆವು. ವಕೀಲರುಗಳು ಎರಡು ದಿವಸದಿಂದ ಉಪವಾಸ ಮಾಡುತ್ತಿದ್ದಾರೆ.

ಅಧ್ಯಕ್ಷರು : ಅದು ತೀರ್ಮಾನವಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಸದನದ ಗಮನಕ್ಕೆ ತರಲಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಬಂದರು. ಈಗ ಖಾಸಗಿ ಪಗರಣದ ಬಗ್ಗೆ ತೆಗೆದುಕೊಳ್ಳೋಣವೇ ?

ಶ್ರೀ ಧರ್ಮಸಿಂಗ್ : ವಕೀಲರುಗಳು ಅಮರಣಾಂತ ಉಪವಾಸ ಮಾಡುತ್ತಿದ್ದರು. ಅದು ಒಂದು ತಿಂಗಳಿನಿಂದ ನಡೆಯುತ್ತಿತ್ತು. ಮೊನ್ನೆ ತಾನೆ ಅವರ ಮಧ್ಯೆ ಮಾತುಕತೆಯಾಗಿ ಎಲ್ಲಾ ಮುಗಿದುಹೋಗಿದೆ. ಈಗ ಅವರು ಮುಷ್ಕರವನ್ನು ವಾಪಸ್ ತೆಗೆದುಕೊಂಡಿದ್ದಾರೆ.

Reg : Lockup death in gulbarga.

Sri Quamarul Islam (Gulbarga) : Sir, in Gulbarga there was a lockup death and the Opposition had called a meeting. In that meeting they had alleged that you have backed one. B.N. Patil, a Congress (I) worker, who has taken money from Sri Kamalakar. Sri Kamalakar was brought to the custody in the Chowk Police Station and afterwards from there to Station Bazar Police Station. He is seeking his support. I want a clarification regarding the position. You have to clarify your position. Secondly, a death has occured and why it has been hided. Whether a murder case has been registered? Two Sub-Inspectors have been suspended in this connection. I want to know whether cases have been registered against those 2 Sub-Inspectors under Section 302 of IPC ? I came to know that the mother of Sri Kamalakar went to the Police Station but the police have refused to register the complaint. Have they have taken the complaint under Section 302 of IPC which she wanted? I want to know whether the complaint of the mother has been registered? The dead body was burnt after 10-12 days. The lockup death was kept very secret. For the last 2 years, there were 4-5 lockup death cases reported from Gulbarga. Last month in Alagi, you know, what has happened. Regarding that an interim report has come. I want you to clarify the position. I want to know details about the incident.

ಶ್ರೀ ಸಿ. ಬೈರೇಗೌಡ : (ವೇಮಗಲ್) ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ವಿಚಾರ. ನಾನು ಆಗಲೇ ಪ್ರಸ್ತಾಪ ಮಾಡಿದ್ದೆ. ಏಕೆಂದರೆ, ಪೊಲೀಸ್ ಠಾಣೆಗಳು ಕಾನೂನು ರಕ್ಷಣಾ ಜನರ ಆಸ್ತಿ–ಪಾಸ್ತಿ, ಪ್ರಾಣ ರಕ್ಷಣೆಗೆ ಇರತಕ್ಕಂಥಾದ್ದು. ಅಥವಾ ಪೊಲೀಸ್ ಠಾಣೆಗಳಲ್ಲಿ ಏನಾಗುತ್ತದೆಂದರೆ, ಅಲ್ಲಿಗೆ ಹೋದವರನ್ನು ಚಚ್ಚಿ ಸಾಯಿಸತಕ್ಕಂಥ ಠಾಣೆಗಳಾಗಿ ಮಾರ್ಪಾಡಾಗುತ್ತಿವೆ. ಮಾನ್ಯ ಕಮರುಲ್ ಇಸ್ಲಾಮ್‌ರವರು ಹೇಳಿದ ಹಾಗೆ ಗುಲ್ಬರ್ಗಾ ನಗರದಲ್ಲಿ ಇದು ಮೊದಲನೆ ಸಾರಿಯಾಗುತ್ತಿಲ್ಲ. ಇದು 5ನೇ ಸಾರಿ ಆಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಹೀಗಾದರೆ ಇವತ್ತಿನ ದಿವಸ ಜನಕ್ಕೆ ರಕ್ಷಣೆ ಎಲ್ಲಿದೆ ಪ್ರಾಣ ರಕ್ಷಣೆ ಎಲ್ಲಿದೆ ಈ ಜನಕ್ಕೆ ಎಂಬುದು ಚರ್ಚೆಯಾಗಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಹೇಳಬೇಕಾಗುತ್ತದೆ. ರಾಜ್ಯದ ಜನತೆಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಿಲ್ಲವೇ ಎಂದು ಸರ್ಕಾರ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಗುಲ್ಬರ್ಗಾದಲ್ಲಿ ತೀವ್ರವಾದ ಪ್ರತಿಭಟನೆ ನಡೆಯುತ್ತಿದೆ. ಇವತ್ತಿನ ದಿವಸ ಎಲ್ಲಾ ಸದಸ್ಯರು ಧರಣಿ, ಸತ್ಯಾಗ್ರಹ ಮಾಡುತ್ತಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರಿಂದ ಧರಣಿ, ಸತ್ಯಾಗ್ರಹ ಪ್ರಾರಂಭವಾಗುತ್ತಿದೆ. ಇಷ್ಟು ಪ್ರತಿಭಟನೆ ನಡೆದಾಗ್ಯೂ ಇದನ್ನು ಮುಚ್ಚಿ ಹಾಕತಕ್ಕಂಥ ಪ್ರಯತ್ನ ನಡೆಯುತ್ತಿದೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಮೊದಲು ಪೊಲೀಸ್ ಠಾಣೆಗಳಲ್ಲಿ, ಗುಲ್ಬರ್ಗಾದಲ್ಲಿಯಾಗಲೀ, ಎಲ್ಲೇ ಆಗಲೀ, ಪೊಲೀಸ್ ಠಾಣೆಗಳು ಇರತಕ್ಕಂಥಾದ್ದು ಜನರ ಪ್ರಾಣ, ಆಸ್ತಿ, ಮತ್ತು ಮಾನ ರಕ್ಷಣೆ ಮಾಡುವುದಕ್ಕೆ. ಅದು ಬಿಟ್ಟು ಅಲ್ಲಿಗೆ ಹೋಗತಕ್ಕಂಥ ಜನರನ್ನು ಹತ್ಯೆ ಮಾಡತಕ್ಕಂಥ ಠಾಣೆಗಳಾಗಬಾರದು. ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು.

ಆ ಒಂದು ಅವಶ್ಯಕತೆಯು ಇದೆ. ಇದು ಇಷ್ಟನ್ನು ಮಾತ್ರ ಹೇಳಿ, ಇವೊತ್ತಿನ ದಿವಸ ಮಾನ್ಯ ಮಂತ್ರಿಯವರು ಇದಕ್ಕೆ ವಿವರವಾದಂಥ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿಧಾನ ಪರಿಷತ್ತಿನಲ್ಲಿಯೂ ಕೂಡ ಅಲ್ಲಿರತಕ್ಕಂಥ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಘಟನೆಯು ಗುಲ್‌ಬರ್ಗಾ ನಗರದಲ್ಲಿ ನಡೆದಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಕಮರುಲ್ಲಾ ಇಸ್ಲಾಂರವರು ಹಾಗೂ ಮಾನ್ಯ ಬೈರೇಗೌಡರು ಹೇಳಿದ ಹಾಗೆ ಇದು ನನ್ನ ಜಿಲ್ಲೆಯಲ್ಲಿ ನಡೆದ ಅನಾಹುತವಾಗಿದೆ. ಅದೇ ತರಹದಲ್ಲಿ ಲಾಕಪ್ ಡೆತ್‌ಗಳು ಗುಲ್‌ಬರ್ಗಾದಲ್ಲಿ ಹಾಗೂ ರಾಜ್ಯದ ಇತರ ಕಡೆಗಳಲ್ಲಿ ಆಗುತ್ತಾ ಇವೆ ಎಂದು ಸದಸ್ಯರು ಹೇಳಿದ್ದಾರೆ. ಇವೊತ್ತು ಒಂದೂವರೆ ವರ್ಷದ ಅವಧಿಯಲ್ಲಿ ನಡೆದ ಲಾಕಪ್ ಡೆತ್‌ಗಳಲ್ಲಿ ಇದೇ ಮೊದಲನೆಯದು. ನಾನು ಮೊನ್ನೆ ಒಂದನೇ ತಾರೀಖಿಗೆ ಗುಲಬರ್ಗಾ ನಗರಕ್ಕೆ ಹೋಗಿದ್ದಾಗ ಈ ಘಟನೆಯು 14–16ನೇ ತಾರೀಖಿನ ದಿವಸ ನಡೆಯಿತು ಎಂದು ಗೊತ್ತಾಯಿತು. ಮೃತ ಯುವಕನ ತಾಯಿ ಚಂಪಾಬಾಯಿ ಎನ್ನುವವರು ನನ್ನ ಹತ್ತಿರ ಬಂದು ತನ್ನ 20 ವರ್ಷದ ಕಮಲಾಕರ ಎಂಬ ಮಗನು ಕಾಣೆಯಾಗಿದ್ದಾನೆ, ಏನಾಗಿದ್ದಾನೆ ಎಂಬ ಸತ್ಯ ಪರಿಸ್ಥಿತಿಯು ತನಗೆ ಗೊತ್ತಿಲ್ಲ, ಇದರ ಬಗ್ಗೆ ಸೂಕ್ತ ತನಿಖೆ ಮಾಡಿಸಬೇಕೆಂದು ಕೇಳಿಕೊಂಡರು. ನನಗೆ ಈ ಸಮಾಚಾರವು ತಿಳಿದ ಕೂಡಲೇ ನಾನು ಆ ದಿವಸ ತತ್‌ಕ್ಷಣ ಎಸ್‌ಪಿ ಮತ್ತು ಅಡಿಷನಲ್ ಎಸ್‌ಪಿಯವರನ್ನು ಕರೆಸಿ ಇದರ ಬಗ್ಗೆ ತನಿಖೆಯಾಗಬೇಕು, ಅಲ್ಲಿರತಕ್ಕಂಥ ಎಸ್‌ಪಿ ಪಾಂಡೆಯವರನ್ನು ಎನ್‌ಕ್ವಾಯರಿ ಆಫೀಸರ್ ಆಗಿ ನೇಮಕ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ. ಪಾಂಡೆಯವರು ತನಿಖೆ ಮಾಡಿ ಒಂದು ವರದಿಯನ್ನು ಎಸ್.ಪಿಯವರಿಗೆ ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ವೀರಭದ್ರಪ್ಪ, ನಿಂಬರ್ಗ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್, ಮತ್ತು ಮುರಗೋಡ್ ಪಿಎಸ್‌ಐ – ಹೀಗೆ ಇಬ್ಬರನ್ನು ಸಸ್ಪೆಂಡ್ ಮಾಡಿದ್ದಾರೆ.

Section 342 'Wrongful confinement'

ಇದರಲ್ಲಿ ಒಂದು ತಿಂಗಳ ಅವಧಿಯಲ್ಲಿ ಅಲ್ಲಿ, ಇಲ್ಲಿ ಇರಿಸಿ ಬೇರೆ ಬೇರೆ ಪೊಲೀಸ್ ಠಾಣೆಗಳಿಗೆ ವರ್ಗಾವಣೆ ಮಾಡಿ ಹೊಡೆತಕ್ಕೆ ಸಿಕ್ಕಿ ಪೆಟ್ಟಾದದ್ದು ಇತ್ಯಾದಿ ವಿವರಗಳು ಕೂಡ ಬಂದಿದ್ದಾವೆ. ಮತ್ತು ಏನು ಸ್ಥಳೀಯ ಪೊಲೀಸರಿಗೆ ಸಸ್ಪೆಂಡ್ ಮಾಡಿದ್ದಾರೆ ಅವರು ಇದರಲ್ಲಿ ಸಿಕ್ಕಿಬಿದ್ದಿದ್ದಾರೆ ಎಂಬ ವಿಚಾರ ಬಂದಮೇಲೆ ಇದನ್ನು ಸಿಓಡಿ ತನಿಖೆಗೆ ವಹಿಸಿಕೊಡಬೇಕೆಂದು ಸಿಓಡಿಗೆ ವಹಿಸಿಕೊಟ್ಟಿದ್ದೇವೆ. ನನ್ನ ಜಿಲ್ಲೆಯ ಪಟ್ಟಣದಲ್ಲಿ ಈ ಒಂದು ಘಟನೆಯಾಗಿದೆ. ಶ್ರೀ ಬಿ.ಎನ್. ಪಾಟೀಲ್ ಎನ್ನತಕ್ಕಂಥವರು ಕಾಂಗ್ರೆಸ್ ಪಕ್ಷದಲ್ಲಿರತಕ್ಕಂಥವರು ಅವರು ಯಾವ ಪಕ್ಷದಲ್ಲಿಯೇ ಇರಲಿ ಬೇರೆ ಎಲ್ಲೇ ಇರಲಿ, ಕಾನೂನು ಎಲ್ಲರಿಗೂ ಒಂದೇ ಆಗಿದೆ. ನಾನು ಕೂಡ ತಮಗೆ ಗೊತ್ತಿರುವ ಹಾಗೆ 20 ವರ್ಷಗಳಿಂದ ಸತತವಾಗಿ ಅಲ್ಲಿಂದ ಚುನಾಯಿತನಾಗಿ ಬರುತ್ತಾ ಇದ್ದೇನೆ. ಅಲ್ಲಿಂದ ಚುನಾಯಿತನಾಗಿ ಬಂದ ಕೂಡಲೇ ಅಲ್ಲಿ ನಡೆದ ಎಲ್ಲಾ ಅನ್ಯಾಯವನ್ನು ಮಾಫೆ ಮಾಡಬೇಕೆಂದೇನೂ ಇಲ್ಲ. ಈಗ ಯಾವುದೇ ಒಂದು ಸಂಶಯ ತಮ್ಮ ಮನಸ್ಸಿನಲ್ಲಿ ಬಂದಿರಬಹುದು. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಇಂಥ ಒಂದು ಘಟನೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ಇದು ಇವೊತ್ತು ನಮ್ಮ ಸರಕಾರದ ಗಮನಕ್ಕೆ ಬಂದಮೇಲೆ ನಾನು ಕೂಡಲೇ ತನಿಖೆ ಮಾಡಿಸುತ್ತಾ ಇದ್ದೇನೆ. ಇವೊತ್ತು ಮರ್ಡರ್ ಕೇಸ್ ರಿಜಿಸ್ಟರ್ಡ್ ಮಾಡತಕ್ಕಂಥಾದ್ದೇ ಇರಲಿ, ಯಾವುದೇ ಇರಲಿ, ಕಾನೂನಿನ ಅಡಿಯಲ್ಲಿ ಯಾವುದೇ ಮುಖಂಡರೇ ಆಗಿರಲಿ, ಎಲ್ಲವೂ ಕಾನೂನಿಗೆ ಒಳಪಟ್ಟು ತನಿಖೆ ಆಗುತ್ತದೆ.

(ಉಪಾಧ್ಯಕ್ಷೆಣಿಯವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಪ್ರಥಮವಾಗಿ ನಮ್ಮ ಜಿಲ್ಲೆಯಲ್ಲಿ 20 ವರ್ಷದ ಯುವಕನ ಹತ್ಯೆಯಾಗಿದೆ, ಅದನ್ನು ಪತ್ತೆಹಚ್ಚತಕ್ಕಂಥ ಕೆಲಸವನ್ನು ನಾವು ಸ್ವಲ್ಪ ದಿವಸಗಳಲ್ಲಿಯೇ ಮಾಡುತ್ತೇವೆ. ನಾನು ಈಗಾಗಲೇ ಡಿಜಿಯವರಿಗೆ ಆದೇಶವನ್ನು ಕೊಟ್ಟಿದ್ದೇನೆ. ತಮ್ಮ ಮನಸ್ಸಿನಲ್ಲಿರುವ ಸಂಶಯವನ್ನು ನಿವಾರಣೆ ಮಾಡುವುದಕ್ಕೆ ಸರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ. ತಾವುಗಳು ಸರಕಾರದ ಮೇಲೆ ಭರವಸೆಯನ್ನು ಇಟ್ಟುಕೊಳ್ಳಬೇಕು. ಈಗಾಗಲೇ ತನಿಖೆ ನಡೆಯುತ್ತಾ ಇದೆ. ಇದರಲ್ಲಿ ಏನನ್ನೂ ಮುಚ್ಚಿಡತಕ್ಕಂಥ ಪ್ರಶ್ನೆಯೇ ಇಲ್ಲ ಎಂದು ಹೇಳಬಯಸುತ್ತೇನೆ.

Sri Quamarvl Islam : Why not a judicial enquiry be instituted ? The case is not registered under seection 320.

Sri Dharm Singh : The case is registered under section 342. You don't worry. The matter is entrusted to C.O.L. We will take action. We are not going to hesitare.

ಶ್ರೀ ಸಿ. ಬೈರೇಗೌಡ : ತಾವುಗಳು ಸಿಓಡಿ ತನಿಖೆಗೆ ಆಜ್ಞೆ ಮಾಡಿದ್ದೀರಿ, ಅದು ಆಗಲಿ. ಆದರೆ ಸೆಕ್ಷನ್ 302ರ ಪ್ರಕಾರ ತಾವುಗಳು ಕೇಸನ್ನು ಖತಕ್ಕಾಗಿ ರಿಜಿಸ್ಟರ್ಡ್ ಮಾಡಿಸಿಲ್ಲ?

ಶ್ರೀ ಧರ್ಮಸಿಂಗ್ : ಸಿಓಡಿ ಎಸ್‌ಕ್ವಾಯರಿ ವರದಿಯು ಬಂದಮೇಲೆ ಯಾರ್ಯಾರು ಇದರಲ್ಲಿ ಒಳಗಾಗಿದ್ದಾರೆ, ಅಷ್ಟೂ ಮಂದಿಯ ಮೇಲೆ ಕ್ರಮ ಜರುಗಿಸುತ್ತೇವೆ. ಮೊದಲು ವಿಚಾರಣಾ ವರದಿಯು ಬರಲಿ, ಆಮೇಲೆ ನೋಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷೆಣಿಯವರೇ, ವಾರ್ತಾ ಮತ್ತು ಪ್ರಚಾರ ಇಲಾಖಾ ಮಂತ್ರಿಯವರು ಸದನಕ್ಕೆ ಬಂದಿದ್ದಾರೆ. ಅವರನ್ನು ಕರೆ ಕಳುಹಿಸಿದ್ದರು. ಅದರ ಬಗ್ಗೆ ತಾವು ಹೇಳಿದ ಲೋಕಸೇವಾ ಆಯೋಗದ ವಿಚಾರವನ್ನು ಎತ್ತಿಕೊಳ್ಳಬಹುದು.

ಉಪಾಧ್ಯಕ್ಷೆಣಿಯವರು : ಈಗ ಲೋಕಸೇವಾ ಆಯೋಗದ ವಿಚಾರ ಪ್ರಸ್ತಾಪ ಮಾಡಿ. ಮಾನ್ಯ ಮುಖ್ಯಮಂತ್ರಿಯವರು.

ವಿಷಯ : ಹೈಸ್ಕೂಲ್ ಉಪಾಧ್ಯಾಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡುವುದನ್ನು ವಾಪಸ್ಸು ತೆಗೆದುಕೊಂಡಿರುವ ಬಗ್ಗೆ :

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷೆಣಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಯಡಿಯೂರಪ್ಪನವರು ಹಾಗೂ ಮತ್ತಿತರು ಲೋಕಸೇವಾ ಆಯೋಗದವರು ಹೈಸ್ಕೂಲ್ ಮುಖ್ಯ ಉಪಾಧ್ಯಾಯರುಗಳ ಹುದ್ದೆಯನ್ನು ಭರ್ತಿ ಮಾಡತಕ್ಕಂಥ ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಲೋಕಸೇವಾ ಆಯೋಗದವರು ಸದರಿ ಹುದ್ದೆಗಳಿಗೆ ಸಂದರ್ಶನವನ್ನು ನಡೆಸುತ್ತಿರತಕ್ಕಂಥಾದ್ದರ ಮಧ್ಯೆ ಸರಕಾರದವರು ನಿಲ್ಲಿಸಿದ್ದಾರೆ. ಮಾನ್ಯ ವಾರ್ತಾ ಸಚಿವರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಲಂಚಗುಳಿತನ ಅಥವಾ ಭ್ರಷ್ಟಾಚಾರದ ಆಪಾದನೆಗಳು ಬಂದಿರುವುದರಿಂದ ಈ ವಿಚಾರಕ್ಕೆ ತಡೆ ನೀಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಎಂದು ನನಗೆ ಗೊತ್ತಾಯಿತು ಕ್ಷಮಿಸಬೇಕು, ಆ ಸಂದರ್ಭದಲ್ಲಿ ನಾನು ಹೊರಗೆ ಇದ್ದೆ. ಮೊದಲು ಎರಡು ವಿಚಾರಗಳನ್ನು ನಾವು ಇದರಲ್ಲಿ ಗಮನಿಸಬೇಕು. ಇದರಲ್ಲಿ ವಾಸ್ತವಾಂಶ, ಸರಕಾರಕ್ಕೆ ಅಧಿಕಾರ ಎಷ್ಟಿದೆ ಎನ್ನತಕ್ಕಂಥಾ ವಿಚಾರ. ಬರೀ ಅದರ ಮೇಲೆ ನಾನು ನಿಂತು ಮಾತನಾಡುತ್ತಿದ್ದೇನೆ ಎಂದು ಯಾರೂ ಭಾವಿಸಬೇಕಾಗಿಲ್ಲ. ಆದರೆ ಒಂದು ವಿಚಾರವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಲೋಕಸೇವಾ ಆಯೋಗದ ಬಗ್ಗೆ ನಮಗೆ ಅಪಾರ ಗೌರವವಿದೆ, ಗೌರವವಿಲ್ಲವೆಂದು ನಾನು ಹೇಳುವುದಿಲ್ಲ Afterall, it is a statutory body, constitutionally created body. We have got all respects. ಆದರೆ ಎಷ್ಟೋ ಸಾರಿ ತಮ್ಮ ಸರಕಾರ ಇದ್ದಾಗಲೂ, ನಮ್ಮ ಸರಕಾರ ಇದ್ದಾಗಲೂ ಕೂಡ ಇಂಥ ಸಂದರ್ಭಗಳಲ್ಲಿ ನಾವು ಕೊಟ್ಟಿರತಕ್ಕಂಥ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕಂಥ ನಿದರ್ಶನಗಳು ಇವೆ. ಆದರೆ ಸಂದರ್ಶನ ನಡೆಯುತ್ತಿರತಕ್ಕಂಥದ್ದರ ಮಧ್ಯೆದಲ್ಲಿ ನೀವು ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿದ್ದೀರಿ ಎಂದು ಹೇಳಬಹುದು. ಎಷ್ಟೋ ಸಾರಿ ಸಂದರ್ಶನವಾದ ನಂತರ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯು ಸರಕಾರಕ್ಕೆ ಬಂದಾಗಲೂ ಕೂಡ ಅದನ್ನು ಸರಕಾರದವರು ಒಪ್ಪಬಹುದು, ಅಥವಾ ಬಿಡಬಹುದು, ಅದು ಸರಕಾರಕ್ಕೆ ಬಿಟ್ಟಿರತಕ್ಕಂಥ ವಿಚಾರ. ಅದು ಸರಕಾರದ ಅಧಿಕಾರದ ವ್ಯಾಪ್ತಿಗೆ ಬರತಕ್ಕಂಥ ವಿಚಾರವಾಗಿದೆ. ನಾವು ಇಲ್ಲಿ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ವಿಚಾರವಿದೆ. ಇವೊತ್ತು ನಾವು ರಿಜಿಸ್ಟ್ರೇಷನ್ ಕಟ್ಟಗಡಿ, ಮತ್ತೊಂದರ ಬಗ್ಗೆ ನಡೆದಿರತಕ್ಕಂಥದ್ದರ ಬಗ್ಗೆ ವಿಚಾರ ಮಾಡಿದರೂ ಕೂಡ ಸಂದರ್ಶನವು ರಾಜ್ಯದ ಹಲವಾರು ಕಡೆಗಳಲ್ಲಿ ನಡೆದಿರತಕ್ಕಂಥ ಸಂದರ್ಭದಲ್ಲಿ ಸರಕಾರಕ್ಕೆ ಕೆಲವಾರು ವಿಚಾರಗಳು

+ ಈ ಚೆಪ್ಪೆ ಮಾನ್ಯ ಸದಸ್ಯರು / ಮುಖ್ಯಮಂತ್ರಿಗಳು / ಮಂತ್ರಿಗಳು ತಮ್ಮ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.